ಕರ್ನಾಟಕ ವಿಧಾನಸಭೆ

ಮಂಗಳವಾರ 30ನೇ ಜುಲೈ 2002 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)ರವರು ಪೀಠವನ್ನು ಅಲಂಕರಿಸಿದ್ದರು.

1. ಪ್ರಕಟಣೆ

ಅಧ್ಯಕ್ಷರು : ಮೊದಲು ಒಂದು ಪ್ರಕಟಣೆ ಇದೆ.

ದಿನಾಂಕ 29.7.2002ರಂದು ನಡೆದ ವಿಧಾನಸಭೆ ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆ ಸೇರಿ ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಂಡಿರುತ್ತದೆ. ದಿನಾಂಕ 30.7.2002ರಂದು ಸದನವು ಬೆಳಿಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆವರೆಗೆ ಸತತವಾಗಿ ಕಾರ್ಯಕಲಾಪಗಳನ್ನು ನಡೆಸುತ್ತದೆ. ಬೆಳಿಗ್ಗೆ 10 ರಿಂದ 4 ಗಂಟೆವರೆಗೆ ವಿವಿಧ ಬೇಡಿಕೆಗಳ ಮೇಲೆ ಚರ್ಚೆ, ಮುಖ್ಯಮಂತ್ರಿಗಳಿಂದ ಉತ್ತರ ಹಾಗೂ ಧನವಿನಿಯೋಗ ಮಸೂದೆಗೆ ಸಂಬಂಧಪಟ್ಟಂತೆ ಶಾಸನ ರಚನೆ ಕಾರ್ಯಕಲಾಪಗಳನ್ನು ನಡೆಸಲಿದೆ. ಸಮಿತಿಯ ತೀರ್ಮಾನದ ಪ್ರಕಾರ ಸರ್ಕಾರದ ಉತ್ತರ ಕೂಡ 4 ಗಂಟೆ ಒಳಗೇ ಮುಗಿಯಬೇಕು. ನಂತರ 4 ಗಂಟೆ ಮೇಲೆ ಪ್ರಶ್ನೋತ್ತರ, ಕಾರ್ಯಕಲಾಪ ಇತ್ಯಾದಿಗಳನ್ನು ತೆಗೆದುಕೊಳ್ಳುವುದು. ದಿನಾಂಕ 31.7.2002 ರಿಂದ 2.8.2002ವರೆಗೆ ಹಾಗೂ 5.8.2002 ರಿಂದ 8.8.2002 ವರೆಗೆ ಸದನ ಸಮಾವೇಶಗೊಂಡು ಪ್ರಶ್ನೋತ್ತರ, ಶಾಸನ ರಚನೆ ಹಾಗೂ ಇತರೆ ಸಾರ್ವಜನಿಕ ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತದೆ.

ಸದನವು ಇದಕ್ಕೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

2. ನಿಲುವಳಿ ಸೂಚನೆ ಮಂಡನೆಗೆ ಅನುಮತಿ.

ವಿಷಯ : ಬೆಂಗಳೂರು ಜಲಮಂಡಲಿಯನ್ನು ಖಾಸಗೀಕರಣ ಗೊಳಿಸುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾವು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಬೆಂಗಳೂರು ಜಲಮಂಡಲಿಯವರು ಆ ಒಂದು ಜಲಮಂಡಲಿಯನ್ನು ಖಾಸಗೀಕರಣ ಮಾಡಲಿಕ್ಕೆ ರಾಜ್ಯ ಸರ್ಕಾರ ಹೊರಟಿರುವುದು ಅದರಲ್ಲೂ ಫ್ರೆಂಚ್ ಕಂಪನಿಗೆ ಈ ಒಂದು ಜಲಮಂಡಲಿಯನ್ನು ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ಕೊಡಲಿಕ್ಕೆ ಹೊರಟಿರುವಂಥಾದ್ದು ಒಂದು ದೊಡ್ಡ ಅಘಾತಕಾರಿಯಾದಂತಹ ಸಂಗತಿ. ಇದರಿಂದ ನಮ್ಮ ಬೆಂಗಳೂರು ಜನತೆಗೆ ಒಳ್ಳೆಯದೇನೂ ಆಗುವುದಿಲ್ಲ. ಬೆಂಗಳೂರಿನ ಜನತೆಯ ಮೇಲೆ ಒಂದು ಹೆಚ್ಚಿನ ಭಾರ ಬೀಳುವಂತಾದ್ದು ಇದೆ. ಈ ಹಿಂದೆ ನಮ್ಮ ದೇಶಕ್ಕೆ ಈಸ್ಟ್ ಇಂಡಿಯಾ ಕಂಪನಿಗಳು ಎಲ್ಲಾ ಬಂದು ಹೋದವು. ನಮ್ಮ ಭಾರತಕ್ಕೆ ಅವರು ಬಂದು ನಮ್ಮ ಹಣವನ್ನು ಅವರು ಇಲ್ಲಿಂದ ತೆಗೆದುಕೊಂಡು ಹೋಗುವಂತಾದ್ದು ಇಲ್ಲಿನ ವ್ಯವಹಾರವನ್ನು ತೆಗೆದುಕೊಂಡು ಹೋಗುವಂತಾದ್ದು, ಲಾಭವನ್ನು ಮಾಡಿಕೊಂಡು ಹೋಗುವಂತಾದ್ದು ಆಯಿತು. ಅದೇ ರೀತಿ ಇವತ್ತು ಯಾವುದೇ ಬಂಡವಾಳ ಇಲ್ಲದೆ ಫ್ರೆಂಚ್ ಕಂಪನಿಗೆ ನಮ್ಮ ರಾಜ್ಯ ಸರ್ಕಾರ ಜಲಮಂಡಲಿಯನ್ನು ಮಾರಾಟ ಮಾಡಲಿಕ್ಕೆ ಹೊರಟಿರುವಂತಾದ್ದು ಒಂದು ದೊಡ್ಡ ದುರ್ದೈವದ